ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಮಾನ್ಯ ಮಂತ್ರಿಗಳು ಈಗ ದಯವಿಟ್ಟು ವಿಧೇಯಕವನ್ನು ಮಂಡಿಸಬೇಕು

ಶ್ರೀ ಕೆ.ಎಸ್.ಈಶ್ವರಪ್ಪ (ಉಪಮುಖ್ಯಮಂತ್ರಿಗಳು (ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :- ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2012

(ಆ) ವಿಧೇಯಕದ ಪರ್ಯಾಲೋಚನೆ

(1) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದುರುಗಿಸಲ್ಪಟ್ಟಂತೆ 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : Explain ಮಾಡಿ ಬಿಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಕಳೆದ ಭಾರಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಎರಡು ಕಡೆ ಸಹ ಸರ್ವಾನುಮತದಿಂದ ಅಂಗೀಕಾರವಾಗಿ ರಾಜ್ಯಪಾಲರಿಗೆ ಹೋಗಿತ್ತು.

ಶ್ರೀ ಸಿದ್ದರಾಮಯ್ಯ : ಯಾವ ಬಿಲ್?

ಅಧ್ಯಕ್ಷರು : ಕೌನ್ಸಿಲ್‌ನಿಂದ ಬಂದಿರುವುದು ಅದನ್ನೇ explain ಮಾಡುತ್ತಿರುವುದು.

ಶ್ರೀ ಸಿದ್ದರಾಮಯ್ಯ : ಇಲ್ಲಾ, ನಾಳೆ ಬೆಳಿಗ್ಗೆ ತೆಗೆದುಕೊಳ್ಳಿ. ನೀವು ತೆಗೆದುಕೊಂಡು ಬಂದ ತಕ್ಷಣ ತೆಗೆದುಕೊಳ್ಳಿ ಎಂದರೆ, ನಾವು ಅದನ್ನು ನೋಡುವುದು ಬೇಡವೆ? ನಾವು ನೋಡಿಕೊಂಡು ಬರುತ್ತೇವೆ, ಅದನ್ನು ನಾಳೆ ತೆಗೆದುಕೊಳ್ಳಿ. ನಾಳೆ ಪಾಸ್ ಮಾಡಿಕೊಡುತ್ತೇವೆ. ಏನು ಆಕಾಶ ಬಿದ್ದು ಹೋಗುವುದಿಲ್ಲ. ಅಲ್ಲಿಂದ ಒಪ್ಪಿಗೆ ಆಗಿ ಬಂದಿದೆ. ಇಲ್ಲಿ ಆಗಬೇಕು ಅಷ್ಟೇ ತಾನೆ? ನಾಳೆ ಬೆಳಿಗ್ಗೆ ಪ್ರಶ್ನೋತ್ತರವಾದ ಮೇಲೆ ಮಧ್ಯಾಹ್ನದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್.ಈಶ್ವರಪ್ಪ : ನಾಳೆ ನಮ್ಮದು ಕೋರ್ ಕಮಿಟಿ ಸಭೆ ಇದೆ. ಇದು ವಿಧಾನ ಮಂಡಲದಲ್ಲಿ, ಅಲ್ಲೂ ಇಲ್ಲೂ ಸರ್ವಾನುಮತದಿಂದ ಪಾಸ್ ಹೋಗಿ ಬಂದಿರುವ ಬಿಲ್. ಇದು ಮತ್ತೆ ಬಹಳ ಚರ್ಚೆ ಮಾಡುವಂಥ ಬಿಲ್ ಏನೂ ಇಲ್ಲ. ಕಳೆದ ಬಾರಿ ನೀವು ಓದಿ ಚರ್ಚೆ ಮಾಡಿ ತೀರ್ಮಾನ ಮಾಡಿ ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿರುವುದೇ , ಅದು ರಾಜ್ಯಪಾಲರ ಹತ್ತಿರ ಹೋಗಿ ವಾಪಸ್ಸು ಬಂದಿರುವುದು.

ಶ್ರೀ ಸಿದ್ದರಾಮಯ್ಯ : ಆದರೂ ಕೆಲವು ಸಲಹೆಗಳನ್ನು ಕೊಡಬೇಕಾಗುತ್ತದೆ. ಅದನ್ನು ನೋಡಿಕೊಂಡು ಬಂದು ನಾಳೆ ಹೇಳುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ : ಇಂದು ಬಹಳ ಇದ್ದಿದ್ದರೆ ನಾನು ಖಂಡಿತ ಕೊಡಿ ಎಂದು ಹೇಳುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ : ಈಗ ಅಂತಹ ಅರ್ಜೆನ್ಸಿ ಏನು? I can't understand. What is the urgency?

ಶ್ರೀ ಕೆ.ಎಸ್.ಈಶ್ವರಪ್ಪ : ನಾಳೆ ನಾನು ಇರುವುದಿಲ್ಲ, ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾಳೆ ಇರದಿದ್ದರೆ ಮಾನ್ಯ ಸುರೇಶ್ ಕುಮಾರ್‌ರವರಿಗೆ ಹೇಳಿ ಹೋಗಿ ಮಾಡಿಕೊಡುತ್ತೇವೆ. ಅದು ವಿಧಾನ ಪರಿಷತ್ತಿನಲ್ಲಿ ಪಾಸ್ ಆಗಿರುವುದು ಅಲ್ಲವೆ?

ಶ್ರೀ ಕೆ.ಎಸ್.ಈಶ್ವರಪ್ಪ : ಪಾಸ್ ಆಗಿರುವುದು.

ಶ್ರೀ ಸಿದ್ದರಾಮಯ್ಯ : ಮಾಡಿ ಮತ್ತೆ, ನೀವೆ pilot ಮಾಡಿದ್ದೀರಿ. You only have piloted the bill.

ಶ್ರೀ ಕೆ.ಎಸ್.ಈಶ್ವರಪ್ಪ : ಏನೂ ಇಲ್ಲ ಸರ್, ಇಂತಹ ಸಮಯದಲ್ಲಿಯಾದರೂ ಸಹಾಯಕ್ಕೆ ಬರುವುದು ಬೇಡವೆ?

ಶ್ರೀ ಸಿದ್ದರಾಮಯ್ಯ : No, No. Please co-operate.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ರೋಷನ್ ಬೇಗ್‌ರವರೆ, ಯಾವಾಗಲೂ ನೀವು ಸಿದ್ದರಾಮಯ್ಯನವರ ಪರವಾಗಿಯೇ ಇರುತ್ತೀರಿ.

ಶ್ರೀ ಸಿದ್ದರಾಮಯ್ಯ : ನಾನು ಆ ಬಿಲ್‌ನ್ನು ನೋಡಿಯೇ ಇಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಅದನ್ನು ನೋಡಿದ್ದೀರಿ, ಹೋದ ಸಲ ಅದರ ಬಗ್ಗೆ ಮಾತನಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ : ನನಗೆ ಕಾಪಿಯೇ ಸಿಕ್ಕಿಲ್ಲ. ನೀವು ಅದನ್ನು ಈಗ ಕೊಟ್ಟಿದ್ದೀರಿ.

ಶ್ರೀ ಟಿ.ಬಿ.ಜಯಚಂದ್ರ : ಈಗ introduce ಮಾಡಿದ್ದೀರಿ, ಕಾಫಿ ಈಗ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ : ಈಗ ಕಾಫಿ ಕೊಡಿ ನೋಡಿಕೊಂಡು ಹೇಳುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ : ಎರಡು ಬಿಲ್‌ಗಳು ಇವೆ. ಎರಡನೆಯ-ದ್ದನ್ನು ನಾಳೆ ಮಾಡೋಣ. ಒಂದು ಬಿಲ್ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿಯಲ್ಲಿ ವಾಸ ಮಾಡುತ್ತಿರುವವರಿಗೆ ಅಂಗೀಕಾರ ಮಾಡಿ ಕಳೆದ ಸಲ ಕಳುಹಿಸಿ ಕೊಟ್ಟಿದ್ದೆವು, ಅದು ವಾಪಸ್ಸು ಬಂದಿದೆ ಅದನ್ನು ಮುಗಿಸೋಣ. ಎರಡನೆಯ ಬಿಲ್, ನಗರ ಪ್ರದೇಶದಲ್ಲಿಯೂ ಆಗಬೇಕೆಂದು ಬಿಲ್ ತರಬೇಕೆಂದು ಹೇಳಿದ್ದರು, ಆ ಬಿಲ್‌ನ್ನು ಕೂಡ ನಾವು ಈಗ ತಂದಿದ್ದೇವೆ. ನಾನು ಅದನ್ನು ನಾಳೆ ತೆಗೆದುಕೊಳ್ಳುತ್ತೇನೆ. ಗ್ರಾಮೀಣ ಪ್ರದೇಶದ ಬಿಲ್‌ನ್ನು ದಯವಿಟ್ಟು ಈಗ ಪಾಸ್ ಮಾಡಿಕೊಡಿ.

ಶ್ರೀ ಸಿದ್ದರಾಮಯ್ಯ : ನಗರ ಪ್ರದೇಶದ ಬಿಲ್ ಪಾಸ್ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲ. We will oppose it tooth and nail. ಹಿಂದೆ ಒಂದು ಸಲ ಗ್ರಾಮೀಣ ಪ್ರದೇಶದ ಬಿಲ್ ಚರ್ಚೆ ಆಗಿದೆ, ಅದರ ಬಗ್ಗೆ

ನಮ್ಮದೇನು ತಕರಾರು ಇಲ್ಲ. ನಾಳೆ ಗ್ರಾಮೀಣ ಪ್ರದೇಶದ ಬಿಲ್ ಪಾಸ್ ಮಾಡಿ ಕೊಡುತ್ತೇವೆ. ನಗರ ಪ್ರದೇಶ ಬಿಲ್ ಮಾತ್ರ ಅದನ್ನು ಒಪ್ಪುವುದಕ್ಕೆ ತಯಾರಾಗಿಲ್ಲ. ಅದನ್ನು ಬೇಕಾದರೆ ಇನ್ನೊಂದು ಸಲ ತೆಗೆದುಕೊಂಡು ಬನ್ನಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಗರ ಪ್ರದೇಶದ್ದು ಒಪ್ಪುವುದು ಬಿಡುವುದು ನಾಳೆ ಚರ್ಚೆ ಆದ ಮೇಲೆ ಪಾಸ್ ಮಾಡಿಕೊಡುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ : ಮುಂದಿನ ಎಲೆಕ್ಷನ್ ಆದ ಮೇಲೆ ತೆಗೆದು-ಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಮಗೆ ಬಿಲ್ ಒಂದೇ ಇಲ್ಲ. ಚರ್ಚೆ ಮಾಡಿ ಎಂದು ಹೇಳಿದರೆ ಹೇಗೆ? ಚರ್ಚೆ ಮಾಡುವುದಕ್ಕೆ ನಮಗೆ ಕಾಪಿ ಬೇಡವೆ?

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಬಹಳ ತಿಳುವಳಿಕಸ್ಥರು ಇದ್ದೀರಿ, ಈ ಬಿಲ್ ಬಗ್ಗೆ ನಿಮಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : It's all right.ಯಾವೊತ್ತೋ ಚರ್ಚೆ ಮಾಡಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಚರ್ಚೆ ಮಾಡಿ ಸರ್ವಾನುಮತದಿಂದ ತೀರ್ಮಾನ ಮಾಡಿ ಒಪ್ಪಿಗೆ ಕೊಟ್ಟಿರುವ ಬಿಲ್ ಇದು.

ಅಧ್ಯಕ್ಷರು : ಕಳೆದ ಅಧಿವೇಶನದಲ್ಲಿ ಚರ್ಚೆ ಆಗಿದೆ.

ಶ್ರೀ ಸಿದ್ದರಾಮಯ್ಯ : ಆಗಿದೆ, ಹಾಗಾದರೆ ಈಗ ಚರ್ಚೆಗೆ ಮುಂಚೆಯೆ ಕಣ್ಣು ಮುಚ್ಚಿಕೊಂಡುಒಪ್ಪಿಕೊಂಡು ಬಿಡುವುದಾ? ನಾವು ಸ್ವಲ್ಪ ನೋಡುವುದು ಬೇಡವೆ?

ಶ್ರೀ ಕೆ.ಎಸ್.ಈಶ್ವರಪ್ಪ : ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳಿ ಎಂದು ನಾನು ಖಂಡಿತವಾಗಿ ಹೇಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಬಿಲ್ ನೋಡಬೇಕೋ ಬೇಡವೆ?

ಅಧ್ಯಕ್ಷರು : ನೋಡಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ರಾಜ್ಯಪಾಲರಿಂದ ಏಕೆ ವಾಪಸ್ಸು ಬಂದಿದೆ, ಏನೆಂದು ವಾಪಸ್ಸು ಬಂದಿದೆ ಅವೆಲ್ಲವನ್ನು ನೋಡಿಕೊಳ್ಳಬೇಕು. ಆ ಕಾಪಿ ಕೊಡಿ ನಾಳೆ ಓದಿಕೊಂಡು ಬಂದು ಹೇಳುತ್ತೇವೆ.

ಶ್ರೀ ಸಿ.ಟಿ.ರವಿ : ಅದರಿಂದ ಬಡವರಿಗೆ ಸಹಾಯವಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಸುಮ್ಮನೆ ಇರಿ, ನಾವೇನು ಬಡವರಿಗೆ ಮಾಡಬೇಡಿ ಎಂದು ಹೇಳಿರುತ್ತೇವೆಯಾ?

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ಖಂಡಿತವಾಗಿ ಬಡವರಿಗೆ ಮಾಡಬೇಡಿ ಎಂದು ಹೇಳಿಲ್ಲ. ನಗರ ಪ್ರದೇಶದ ಬಗ್ಗೆ ಖಂಡಿತವಾಗಿ ನಾಳೆ ಚರ್ಚೆ ಮಾಡೋಣ.

ಶ್ರೀ ಸಿದ್ಧರಾಮಯ್ಯ : ನಾಳೆ ಬೇಕಾದರೆ ಇದನ್ನೇ ಮೊದಲು ತೆಗ ೆದು-ಕೊಂಡು ಪಾಸ್ ಮಾಡಿಕೊಡೋಣ.ನಾಳೆ ಬೆಳಿಗ್ಗೆಯೇ ಮಾಡೋಣ. Tomorrow, we will definitely co-operate. ನಾಳೆ ನಾವು ಒಪ್ಪಿಕೊಳ್ಳುತ್ತೇವೆ, Definite ಆಗಿ ಒಪ್ಪಿಕೊಳ್ಳುತ್ತೇವೆ. ಆಯಿತು ಬಿಡಿ, introduce ಮಾಡಿದ್ದೀರಲ್ಲಾ?

ಶ್ರೀ ಕೆ.ಎಸ್.ಈಶ್ವರಪ್ಪ : ಏಕೆ ಹೀಗೆ ಹಠ ಮಾಡುತ್ತೀರಿ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ನಮ್ಮದು ಹಠ ಇಲ್ಲ, ನಿಮ್ಮದೇ ಹಠ.

ಶ್ರೀ ಕೆ.ಎಸ್.ಈಶ್ವರಪ್ಪ : ನನ್ನದು ಹಠವಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, -------..

ಶ್ರೀ ಸಿದ್ಧರಾಮಯ್ಯ : ಹಠ ಮಾಡಿಕೊಂಡು ನಿಂತೇ ಬಿಟ್ಟಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ನಾಳೆ ಇರುವುದಿಲ್ಲ.ಬೇರೆ ಬೇರೆ ಕಾರಣಗಳು ಇವೆ, ಅದು ನಿಮಗೂ ಗೊತ್ತಿದೆ. ಹಾಗಾಗಿ ನಾನು ಇಲ್ಲದಿರುವಾಗ ಈ ಬಿಲ್ ಪಾಸ್ ಮಾಡಿಕೊಡುವುದು ನನಗೆ ಸಮಾಧಾನವಿಲ್ಲ. ಏಕೆಂದರೆ, ಜೀವನದಲ್ಲಿ ವಿಶೇಷವಾಗಿ ಇದೊಂದು ಅವಕಾಶ ಇರುತ್ತದೆ.

ಶ್ರೀ ಸಿದ್ಧರಾಮಯ್ಯ : Even in your absence we will pass it. ಬೇಕಾದರೆ ನಾಳೆ ಬೆಳಗ್ಗೆ ಬಂದು ಹೊರಟು ಹೋಗಿ ಬಿಡಿ.

ನಿಮ್ಮದೇ ಮೊದಲು ತೆಗೆದುಕೊಂಡು ಬಿಡೋಣ. ನಿಮ್ಮನ್ನು ಹೆಲಿಕ್ಯಾಪ್ಟರ್-ನಲ್ಲಿ ಕಳುಹಿಸಿ ಕೊಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ : ಹೆಲಿಕಾಪ್ಟರ್‌ನಲ್ಲಿ ಎಲ್ಲಿಗೆ ಹೋಗಲಿ?

ಶ್ರೀ ಸಿದ್ದರಾಮಯ್ಯ : ನಾಳೆ ಕೋರ್ ಕಮಿಟಿ ಏನಾದರೂ ಇದ್ದರೆ ಹೋಗಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಾನು ಇಲ್ಲಿಯೆ ಇರುತ್ತೇನೆಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ : ಇಲ್ಲಿಯೇ ಇರುತ್ತೀರಾ? ಹಾಗಾದರೆ ಪಾಸ್ ಮಾಡಿ ಕೊಡೋಣ ಬಿಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ನೀವು ವಿರೋಧ ಪಕ್ಷದ ನಾಯಕರಾಗಿದ್ದವರು, ನಿಮಗೆ ಸಭೆಗಳ ಬಗ್ಗೆ ಎಲ್ಲಾ ಗೊತ್ತಿದೆ. General ಆಗಿ ನಮ್ಮ ಸಭೆಗಳ ಬಗ್ಗೆ ನಿಮಗೆ ಗೊತ್ತಿದೆ. ನಾನು ಪಕ್ಷದ ಅಧ್ಯಕ್ಷನಾಗಿರುವುದರಿಂದ ಅಲ್ಲಿಗೆ ಹೋಗಬೇಕಾಗಿದೆ. ಅದಕ್ಕಾಗಿ ನಾನು ನಿಮ್ಮಲ್ಲಿ ಮನವಿ ಮಾಡುತ್ತಿರುವುದು. ಇದು 10 ನಿಮಿಷದಲ್ಲಿ ಮುಗಿಯುತ್ತದೆ.

ಶ್ರೀ ಸಿದ್ದರಾಮಯ್ಯ : I do not know, why you are so serious? ನಾಳೆ ಮಾಡಿಕೊಡುತ್ತೇವೆ ಬಿಡಿ. 5 ನಿಮಿಷದಲ್ಲಿ ಪಾಸ್ ಮಾಡಿ ಕೊಡುತ್ತೇವೆ ಬಿಡಿ.

ಶ್ರೀ ಕೆ.ಎಸ್.ಈಶ್ವರಪ್ಪ : ಈ ರೀತಿ ಹೇಳಿದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಆ ಕಾಪಿ ಕೊಡಿ ಸ್ವಲ್ಪ ಇಲ್ಲಿ ನೋಡೋಣ.

(ಇ) ವಿಧೇಯಕವನ್ನು ಮಂಡಿಸುವುದು

(1) ಕರ್ನಾಟಕ ವಿಧಾನ ಮಂಡಲದವರ ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಮೂರನೇ ತಿದ್ದುಪಡಿ ವಿಧೇಯಕ

ಅಧ್ಯಕ್ಷರು : ಕರ್ನಾಟಕ ವಿಧಾನ ಮಂಡಲದವರ ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಮೂರನೇ ತಿದ್ದುಪಡಿ) ವಿಧೇಯಕ, 2012.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಇದೊಂದು ಬಿಲ್ ಮಂಡಿಸಿ ಬಿಡುತ್ತೇನೆ.